# ಅಣಬೆ ಸಂಶೋಧನಾ ಪ್ರಯೋಗಾಲಯ
# ಸಸ್ಯ ರೋಗ ಶಾಸ್ತ್ರ ವಿಭಾಗ
# ಭಾ.ಕೃ.ಅ.ಸಂ.–ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ,
# ಹೆಸರಘಟ್ಟ ಕೆರೆ ಅಂಚೆ ಬೆಂಗಳೂರು–560089

**ವಿವಿಧ ಅಣಬೆ ತಳಿಗಳ ಬೀಜ ಮತ್ತು ಸಿದ್ದ ಅಣಬೆ ಬ್ಯಾಗ್‌ನ ಪರಿಷ್ಕೃತ ಬೆಲೆಗಳು (01.01.2026ರಿಂದ)**

| ಕ್ರ. ಸ. | ವಿಷಯ | ಬೆಲೆ ಪ್ರತೀ ಕೆ.ಜಿ. (ರೂ)* |
|---|---|---|
| 1 | ಅಣಬೆ ಬೀಜ / ಸ್ಪಾನ್ | |
| | i. ಎಲ್ಮ್ ಆಯಸ್ಟರ್ ಅಣಬೆ (IIHR-HU-1) | 100.00 |
| | ii. ಬಿಳಿ ಆಯಸ್ಟರ್ ಅಣಬೆ (IIHR-PFL-1) | 100.00 |
| | iii. ಗುಲಾಬಿ ಆಯಸ್ಟರ್ ಅಣಬೆ (Arka OM-1) | 100.00 |
| | iv. ಆಯಸ್ಟರ್ ಬೂದು ಅಣಬೆ (IIHR-PSC-1) | 100.00 |
| | v. ಹಳದಿ ಆಯಸ್ಟರ್ ಅಣಬೆ (IIHR-YO-1) | 100.00 |
| | vi. ಟ್ಯೂಬರ್ ಆಯಸ್ಟರ್ ಅಣಬೆ (IIHR-PT-1) | 100.00 |
| | vii. ಆಸ್ಟ್ರಿಯೇಟಸ್ ಆಯಸ್ಟರ್ ಅಣಬೆ (IIHR-OST-1) | 100.00 |
| | viii. ಕಿಂಗ್ ಆಯಸ್ಟರ್ ಅಣಬೆ (PE-2) | 110.00 |
| | ix. ಹಾಲು ಅಣಬೆ (IIHR-CI-1) | 100.00 |
| | x. ಮ್ಯಾಕ್ರೋಸೈಬೆ ಅಣಬೆ (IIHR-MG-1) | 100.00 |
| | xi. ಶಿತಾಕೆ ಅಣಬೆ (IIHR-LE-1) | 110.00 |
| | xii. ಲಯನ್ಸ್ ಮೇನ್ ಅಣಬೆ (IIHR-HE-1) | 110.00 |
| 2 | ಕಲ್ಚರ್ ಟ್ಯೂಬ್ (ಬಿಡುಗಡೆ ಮಾಡಿದ ತಳಿಗಳು) | 2000.00 (ಪ್ರತಿ ಟ್ಯೂಬ್‌ಗೆ) |
| 3 | ಮದರ್ ಸ್ಪಾನ್ (ಬಿಡುಗಡೆ ಮಾಡಿದ ತಳಿಗಳು) | 1250.00 (ಪ್ರತಿ ಬಾಟಲ್‌ಗೆ) |
| 4 | ಜನರೇಶನ್ I ಸ್ಪಾನ್ ಬಾಟಲ್ (ಬಿಡುಗಡೆ ಮಾಡಿದ ತಳಿಗಳು) | 600.00 (ಪ್ರತಿ ಬಾಟಲ್‌ಗೆ) |
| 5 | ಸಿದ್ದ ಅಣಬೆ ಬ್ಯಾಗ್–1 ಕೆ.ಜಿ. | 40.00 (ಪ್ರತಿ ಬ್ಯಾಗ್‌ಗೆ) |
| | ಸಿದ್ದ ಅಣಬೆ ಬ್ಯಾಗ್–2 ಕೆ.ಜಿ. | 60.00 (ಪ್ರತಿ ಬ್ಯಾಗ್‌ಗೆ) |

*** ಅಣಬೆ ಬೀಜದ ಬೆಲೆ ಬದಲಾಗಬಹುದು**

**ಸೂಚನೆ:**

1. ಬೆಂಗಳೂರಿನ ಹೆಸರಘಟ್ಟದಲ್ಲಿರುವ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯ ಅಣಬೆ ಸಂಶೋಧನಾ ಪ್ರಯೋಗಾಲಯಕ್ಕೆ ವೈಯಕ್ತಿಕವಾಗಿ ಬಂದು ಅಣಬೆ ಬೀಜ ಮತ್ತು ಸಿದ್ದ ಅಣಬೆ ಬ್ಯಾಗ್‌ಗಳನ್ನು ನಗದು ಪಾವತಿಸಿ ಸಂಗ್ರಹಿಸಬೇಕಾಗಿದೆ
2. ಸಂಸ್ಥೆಯು ಅಣಬೆ ಬೀಜ ಮತ್ತು ಸಿದ್ದ ಅಣಬೆ ಬ್ಯಾಗ್‌ಗಳ ಸಾಗಾಣೆಯನ್ನು ಕೈಗೊಳ್ಳುವುದಿಲ್ಲ.
3. ಅಣಬೆ ಬೀಜವು 1 ಕೆ.ಜಿ ಪಾಲಿಪ್ರೊಪಲಿನ್ ಬ್ಯಾಗ್‌ಗಳಲ್ಲಿ ದೊರೆಯುತ್ತದೆ
4. ಬೆಳೆಗಾರರು ಸ್ಪಾನ್ ತೆಗೆದುಕೊಂಡು ಹೋಗಲು ತಮ್ಮದೇ ವ್ಯವಸ್ಥೆ ಮಾಡಿಕೊಳ್ಳಬೇಕು ಮತ್ತು ಚೀಲವನ್ನು ತರಬೇಕು
5. ಅಣಬೆ ಬೀಜ ಬೇಕಾದವರು 30 ದಿನ ಮೊದಲೇ ಬೇಡಿಕೆ ಸಲ್ಲಿಸಬೇಕು

**ಅಣಬೆ ಬೀಜ ಕಾಯ್ದಿರಿಸಲು ಮತ್ತು ಧೃಡಿಕರಿಸಲು**

**ದೂರವಾಣಿ ಸಂಖ್ಯೆ– 080-223086100 ವಿಸ್ತರಣೆ–348/349, ಮೋ: 70909 49605 ಗೆ ಕರೆ ಮಾಡಿ**

**ಬೆಳೆಗಾರರು ಅಣಬೆ ಬೀಜ ತೆಗೆದುಕೊಂಡು ಹೋಗಲು ಬರುವ ಮುನ್ನ ಮತ್ತೊಮ್ಮೆ ತಮ್ಮ ಅಣಬೆ ಬೀಜದ ಲಭ್ಯತೆಯ ಬಗ್ಗೆ ದೃಡಿಕರಿಸಕೊಳ್ಳಬೇಕು.**

# ಅಣಬೆ ಬೀಜ ಬುಕಿಂಗ್ ಪ್ರಕ್ರಿಯೆ

1. ಬೆಳೆಗಾರರು ಅಣಬೆ ಲ್ಯಾಬ್‌ಗೆ ಕರೆ ಮಾಡುವ ಮೊದಲು, ಮೇಲೆ ತಿಳಿಸಿರುವ ಅಣಬೆ ತಳಿಗಳ ವಿವರವನ್ನು ಓದಿಕೊಳ್ಳಿ.
2. ಅಣಬೆ ಬೀಜಕ್ಕಾಗಿ 20-30 ದಿನ ಮೊದಲೇ ಬೇಡಿಕೆ ಸಲ್ಲಿಸಬೇಕು
3. ಅಣಬೆ ಲ್ಯಾಬ್ ಮೊಬೈಲ್ ಸಂಖ್ಯೆ 07090949605 ಅಥವಾ ಸ್ಥಿರ ದೂರವಾಣಿ 080–23086100 ವಿಸ್ತರಣೆ: 349/348 ಸಂಖ್ಯೆಗೆ ಅಧಿಕೃತ ಕೆಲಸದ ದಿನಗಳಲ್ಲಿ ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 12.00ರ ವರಗೆ ಮತ್ತು ಮಧ್ಯಾಹ್ನ 1.00 ರಿಂದ 3.30ರ ವರಗೆ ಮಾತ್ರ ಕರೆಮಾಡಿ ಬುಕಿಂಗ್ ಮಾಡಬಹುದು.
4. ಕರೆ ಮಾಡಿದಾಗ ಬುಕಿಂಗ್ ಮಾಡಬೇಕಾದ ಅಣಬೆ ತಳಿಯ ಹೆಸರು, ಪ್ರಮಾಣ, ಬುಕಿಂಗ್ ಮಾಡುವ ವ್ಯಕ್ತಿಯ ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯ ವಿವರಗಳನ್ನು ನೀಡಿ. ನಿಮ್ಮ ಬುಕಿಂಗ್ ವಿವರಗಳನ್ನು ಸರಿಯಾಗಿ ಬರೆದಿಟ್ಟುಕೊಳ್ಳಿ. ಅಣಬೆ ಲ್ಯಾಬ್‌ಗೆ ಕರೆ ಮಾಡಲು ನಿರ್ಧಿಷ್ಟ ದಿನಾಂಕವನ್ನು ನೀಡಲಾಗುತ್ತದೆ.
5. ಕೊಟ್ಟಿರುವ ನಿರ್ಧಿಷ್ಟ ದಿನಾಂಕದಂದು ಅಣಬೆ ಲ್ಯಾಬ್‌ಗೆ ಕರೆ ಮಾಡಿ ನಿಮ್ಮ ಹೆಸರು, ಬುಕಿಂಗ್ ದಿನಾಂಕ, ಅಣಬೆ ತಳಿಯ ಹೆಸರು ಮತ್ತು ಪ್ರಮಾಣದ ವಿವರಗಳನ್ನು ಒದಗಿಸಿ.
6. ಅಣಬೆ ಬೀಜವು ಸಿದ್ಧವಾಗಿದ್ದರೆ ಅದನ್ನು ಸಂಗ್ರಹಿಸಲು ದೃಢೀಕರಣ ದಿನಾಂಕವನ್ನು ನೀಡಲಾಗುತ್ತದೆ.
7. ಅಣಬೆ ಬೀಜವು ಸಿದ್ಧವಾಗಿಲ್ಲದಿದ್ದರೆ ಮತ್ತೊಂದು ದಿನಾಂಕವನ್ನು ನೀಡಲಾಗುತ್ತದೆ. ನೀಡಿರುವ ಹೊಸ ದಿನಾಂಕಕ್ಕೆ ದಯವಿಟ್ಟು ಮತ್ತೆ ಕರೆ ಮಾಡಿ.
8. ಅಣಬೆ ಬೀಜವನ್ನು ಅಧಿಕೃತ ಕೆಲಸದ ಸಮಯದಲ್ಲಿ ಬೆಳಿಗ್ಗೆ 9.30 ರಿಂದ ಮಧ್ಯಾಹ್ನ 12.00ರ ವರಗೆ ಮತ್ತು ಮಧ್ಯಾಹ್ನ 1.00 ರಿಂದ 3.00ರ ವರಗೆ ಮಾತ್ರ ಸಂಗ್ರಹಿಸಿ.

9. ನಿರ್ದಿಷ್ಟ ದಿನಾಂಕದಂದು ಕರೆ ಮಾಡದಿದ್ದರೆ, ಅಣಬೆ ಬೀಜದ ಬುಕಿಂಗ್ ರದ್ದಾಗುತ್ತದೆ. ಅಣಬೆ ಬೀಜ ಬೇಕಿದ್ದಲ್ಲಿ ಹೊಸ ಬುಕಿಂಗ್ ಮಾಡಬೇಕಾಗುತ್ತದೆ.
10. ವ್ಯಕ್ತಿಯು ಅಧಿಕೃತಗೊಳಿಸಿದ ದಿನಾಂಕದಂದು ಬೀಜ ಸಂಗ್ರಹಿಸಿಕೊಳ್ಳದಿದ್ದಲ್ಲಿ ಅವರ ಬುಕಿಂಗ್ ರದ್ದಾಗುತ್ತದೆ.
11. ಒಂದು ವೇಳೆ ಸಂಸ್ಥೆ ನಿಗದಿಪಡಿಸಿದ ದಿನಾಂಕದಂದು ಬೀಜ ಸಂಗ್ರಹಿಸಿಕೊಳ್ಳಲು ಕಷ್ಟವಾದ್ದಲ್ಲಿ, ಕನಿಷ್ಟ 1–2 ದಿನ ಮೊದಲು ಅಣಬೆ ಲ್ಯಾಬ್‌ಗೆ ಕರೆ ಮಾಡಿ ಮಾಹಿತಿ ನೀಡಿ ಪರ್ಯಾಯ ದಿನಾಂಕವನ್ನು ಪಡೆದುಕೊಳ್ಳಬಹುದು.
12. ನಿಖರವಾದ ಹಣವನ್ನು ನೀಡಿ ಅಣಬೆ ಬೀಜವನ್ನು ಪಡೆದುಕೊಳ್ಳಿ.